ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರ, ನಾವು ೩ ಸಲ ನೋಟೀಸ್ ಕೊಟ್ಟಿದ್ದೇನೆ. ಮೊದಲನೆಯದು ೧೬-೧೨-೬೪ರಲ್ಲಿ, ಎರಡನೆಯದು ಜನವರಿ ೯, ೧೯೬೬ರಲ್ಲಿ ಮತ್ತು ಮೂರನೆಯದು ೧೬-೧-೬೬ರಲ್ಲಿ. ಅವರಿಗೆ ಪೂರ್ಣವಾದ ನೋಟೀಸ್ ಕೊಟ್ಟು, ಅವರು ಮಾಡಿರುವ ಕಾನೂನು ವಿರುದ್ಧವಾದ ಕೆಲಸವು ಸರಿಯಲ್ಲವೆಂದು ಹೇಳಿ, ಹಾಗೂ ನೋಟೀಸ್ ಕೊಟ್ಟ ನಂತರ ಈ ಕೆಲಸ ನಡೆದಿದೆ. ನಿವೇಶನಗಳ ಬಗ್ಗೆ, ಮನೆಗಳನ್ನು ಕೊಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದಕ್ಕೂ ಇದಕ್ಕೂ ಸಂಬಂಧವಿಲ್ಲ. ಊರು ನಿಯಂತ್ರಿತವಾಗಿ ಬೆಳೆಯುವುದಕ್ಕೆ ಪುರಸಭೆಯವರು ಕೆಲವು ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಾರೆ. ಖಾಲಿ ಜಾಗ ಇದೆಯೆಂದು ಮನೆ ಇದ್ದವರೂ, ಇಲ್ಲದವರೂ ಎಲ್ಲರೂ ಬಂದು ಗುಡಿಸಲುಗಳನ್ನು ಹಾಕಿದರೆ, ನೀರು, ರಸ್ತೆಗಳ ವ್ಯವಸ್ಥೆ ಹಾಗೂ ದೀಪದ ವ್ಯವಸ್ಥೆಗಳನ್ನು ಮಾಡುವವರು ಯಾರು ? ಈ ಜವಾಬ್ದಾರಿಯನ್ನು ಹೊತ್ತಿರುವವರು ಊರಿನ ಪ್ರಮುಖರು ನಗರದ ಹಿತೈಷಿಗಳು. ಅವರೂ ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ನಾನೂ ಇನ್ನೂ ಮುಂದೆ ಹೋಗಿ ಹೇಳುತ್ತೇನೆ. ಇದೇ ರೀತಿಯ ಅಥವಾ ಬೇರೆ ಜವಾಬ್ದಾರಿಯನ್ನು ಮುನಿಸಿಪಾಲಿಟಿಯವರು ತೆಗೆದುಕೊಂಡು ನಿವೇಶನ ರಹಿತರಿಗೆ ಯುಗಾದಿ ಹಬ್ಬದ ಸಮಯಕ್ಕೆ ನಿವೇಶನಗಳನ್ನು ಹಂಚಬೇಕೆಂದು ತಿಳಿಸಿದ್ದೇನೆ. ಖಾಲಿ ಜಾಗ ಇದೆಯೆಂದು ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಜನರ ಹಿತದೃಷ್ಟಿಯಿಂದಲೇ ನಾವು ಇದನ್ನು ಮಾಡುತ್ತಿದ್ದೇವೆ. ನಿವೇಶನ ರಹಿತರಿಗೆ ನಿವೇಶನಗಳನ್ನು ಕೊಡುವ ಕೆಲಸವನ್ನು ನಾವು ನಿಲ್ಲಿಸುವುದಿಲ್ಲ, ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಯಾರು ಯಾರು ಅರ್ಹರಿದ್ದಾರೆ ಅವರಿಗೆ ನಿವೇಶನಗಳನ್ನು ಕೊಡುವ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಯುಗಾದಿ ಹಬ್ಬದ ಹೊತ್ತಿಗೆ ನಿವೇಶನಗಳನ್ನು ಅಲ್ಲಿರುವವರಿಗೂ ಹಂಚುತ್ತೇವೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಲಕ್ಕಪ್ಪ —ಗುಡಿಸಲುಗಳನ್ನು ಕಿತ್ತುಹಾಕಿದಂತಹ ಕಾಲದಲ್ಲಿ ಅಲ್ಲಿನ ಸಣ್ಣ ಸಣ್ಣ ಕಾರ್ಮಿಕರು ಕೂಡಿಹಾಕಿಕೊಂಡಿದ್ದಂತಹ ಆಹಾರಧಾನ್ಯಗಳು ಬಟ್ಟೆಬರೆಗಳು, ಇನ್ನಿತರ ಸಣ್ಣ ಪುಟ್ಟ ಸಾಮಾನುಗಳೆಲ್ಲಾ ಹಾಳಾಗಿ ಹೋಗಿವೆ. ಅದಕ್ಕೆ ಕೋಲ್ಕರ ಪುರಸಭೆ ವತಿಯಿಂದ ಅಥವಾ ಸರ್ಕಾರದ ವತಿಯಿಂದ ಅವರಿಗೆ ಪರಿಹಾರವನ್ನು ಕೊಡಿಸುವಂತಹ ಕಾರ್ಯವನ್ನು ಮಾನ್ಯ ಸಚಿವರು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,—ನಾನು ಆಗಲೇ ಉತ್ತರ ಹೇಳಿದ್ದೇನೆ.

ನಿಯಮ ೩೩೪ ಮೇರೆಗೆ

ಅಧ್ಯಕ್ಷರು.—ಮಾನ್ಯ ವಿನಯಕುಮಾರ್ ಸೊರಕೆ, ಶ್ರೀ ನೀಲಕಂಠಗೌಡ ವಿ. ಪಾಟೀಲ ಶ್ರೀ ಆರ್. ರಾಮಯ್ಯ ಸದಸ್ಯರುಗಳು ಇಲ್ಲ. ಈಗ ಶ್ರೀಮತಿ ಸುಮಾ ವಸಂತರವರು ತಮ್ಮ ಹೆಸರಿನಲ್ಲಿರುವ ವಿಷಯವನ್ನು ಪ್ರಸ್ತಾಪಮಾಡಬಹುದು.

(೧) ಚನ್ನಪಟ್ಟಣ ತಾಲ್ಲೂಕಿನ ಪಟ್ಲು ಗ್ರಾಮದಲ್ಲಿ ಪೋಲಿಸರಿಂದ ಕಿರುಕುಳ

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೆ, ಚನ್ನಪಟ್ಟಣ ತಾಲ್ಲೂಕಿನ ಪಟ್ಲು ಗ್ರಾಮದಲ್ಲಿ ಜಮೀನಿನ ವಿವಾದದ ಬಗ್ಗೆ ಭೂ ನ್ಯಾಯ ಮಂಡಲಿಯ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ನಡೆಯುತ್ತಿರುವ ಸಂದರ್ಭದಲ್ಲಿ ಭೂ ಸ್ವಾಧೀನ ತೆಗೆದುಕೊಳ್ಳುವ ಸಂದರ್ಭದಲ್ಲಿ ಪೋಲಿಸರ ರಕ್ಷಣೆಯ ಬಗ್ಗೆ ಚನ್ನಪಟ್ಟಣ ಪೋಲಿಸ್ ಠಾಣೆಯಿಂದ ಎಡಾರ್ಸ್‌ಮೆಂಟ್ ಇದ್ದಾಗ್ಯೂ ಜಮೀನಿನ ಗೋಣಿದಾರರಾದ ಚಿಕ್ಕಬಂದೀಗೌಡ ಅವರ ಹೆಂಡತಿ ಪದ್ಮಮ್ಮ ಹಾಗೂ ಮಗ ಗುರುರಾಜ ಅವರುಗಳನ್ನು ಬಂಧಿಸಿರುವ ಬಗ್ಗೆ ಮಾನ್ಯ ಗೃಹಮಂತ್ರಿಗಳಿಗೆ ಹಾಗೂ ಪೋಲಿಸು ಇಲಾಖೆಯ ಮಹಾ ನಿರ್ದೇಶಕರಿಗೂ ಈ ವಿಷಯವನ್ನು ತಿಳಿಸಿದ್ದಾಗ್ಯೂ ಈವರೆಗೆ ಸದರಿ ಪೋಲಿಸು ಇನ್ಸ್‌ಪೆಕ್ಟರ್ ಮೇಲೆ ಯಾವ ಕ್ರಮವನ್ನು ಕೈಗೊಳ್ಳದಿರುವುದರಿಂದ ಕೂಡಲೇ ಈ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.—(ಗೃಹ ಸಚಿವರು) ಇದರ ಬಗ್ಗೆ ವಿಚಾರಣೆಗೆ ಆರ್ಡರ್ ಮಾಡಿದ್ದೇನೆ ವಿಚಾರಣೆಯಂ ವರದಿ ಬಂದಮೇಲೆ ಏನಾದರೂ ತಪ್ಪಿದ್ದರೆ. ಕ್ರಮ ತೆಗೆದುಕೊಳ್ಳುತ್ತೇನೆ.